ಫ್ಯಾಷನ್

# ತ್ರಿಕಾಲ ರಕ್ಷಕ ಬಾಂಬರ್ ಜಾಕೆಟ್

**ಬಾಂಬರ್ ಜಾಕೆಟ್ ಸ್ಟೈಲ್ ಹೊಸ ಅವತಾರ ತಾಳುತ್ತಿದೆ. ಯುಗ ಯುಗಗಳೇ ಸಾಗಿದರೂ ಕಾಲಾತೀತ ಜಾಕೆಟ್ ತನ್ನತನವನ್ನು ಉಳಿಸಿಕೊಂಡು ಉಡುಗೆಯ ಜಗತ್ತಿನಲ್ಲಿ ತನ್ನದೇ ಮೋಡಿಯನ್ನು ಸೃಷ್ಟಿಸಿದೆ.**

■ **ರಾಘು**



ಮಾನ್ಸೂನ್ ಮಾರುತಗಳು ಬೀಸುತ್ತಿದ್ದಂತೆ, ನಿಸರ್ಗದ ಹಸುರು ಕಣ್ಣುಗಳಿಗೆ ಆಹ್ಲಾದದ ಮುದವನ್ನು ನೀಡುತ್ತದೆ. ಮೈ ನವಿರೇಳಿಸುವ ತಂಗಾಳಿಯ ಚಳಿಗೆ ಮನಸು ಆಹಾ ಬೆಚ್ಚಗಿದ್ದರೆ ಎಂದು ತವಕಿಸುತ್ತದೆ. ಮುಂಗಾರಿನ ಮನೆ ಅಂಗಳದಲ್ಲಿ ನಿಂತ ಆಷಾಢ ಮತ್ತು ಶ್ರಾವಣ ಒಳಬರಲು ಕಾಯುತ್ತಿವೆ. ಪುರುಸೊತ್ತು ಇಲ್ಲದೆ ಬೀಸುವ ಆ ಕಾಲದ ತಂಗಾಳಿಯಂತೂ ದೇಹವನ್ನು ನಡುಗಿಸುತ್ತಿರುತ್ತದೆ. ಸೂರ್ಯನೇ ಕಾಣದ ನಡುಗುವ ಚಳಿಗೆ ನಾಲಿಗೆ ಕುರುಕಲಿನ ಚಾಪಲ್ಯ ಬಯಸುತ್ತದೆ. ದೇಹ ಬೆಚ್ಚಗಿನ ಹೊದಿಕೆಯ ಅಪ್ಪುಗೆಗೆ ಹಾತೊರೆಯುತ್ತದೆ. ಹೊದ್ದು ಮಲಗಿ ಮೊಬೈಲ್ ಮೇಲೆ ಕೈಯಾಡಿಸುತ್ತಿದ್ದರೆ ಸಮಯ ಕಳೆದದ್ದೇ ತಿಳಿಯದು. ಆ ಕ್ಷಣ ಕರ್ತವ್ಯಪ್ರಜ್ಞೆ ಮಲಗಿದವರನ್ನು ಝಾಡಿಸಿ ಎಬ್ಬಿಸಿಯೇ ಬಿಡುತ್ತದೆ. ಆ ಹೊತ್ತಿಗೆ ಆಸರೆಗೆ ನಾನಿದ್ದೇನೆ ಎಂದು ನಮ್ಮ ಎದೆಗೂಡು ಬೆಚ್ಚಗಿಡಲು ಅಪ್ಪಿ ಬರುವುದೇ ಬಾಂಬರ್ ಜಾಕೆಟ್.

ಎದೆಗುಂದ ಬೇಡ! ನಿನ್ನ ಎದೆಗೂಡಿಗೆ ಬೆಚ್ಚಗಿನ ಕಾವು ನನ್ನ ತೋಳ ತೆಕ್ಕೆಯಲ್ಲಿದೆ ಎಂದು ಪ್ರೀತಿಯಿಂದ ಅಪ್ಪುವ, ಬಾಂಬರ್ ಜಾಕೆಟ್ ಕಾಲಾತೀತ ಗುಣ ಧರ್ಮವನ್ನು ಧರಿಸಿದೆ. ಅದು ಎಲ್ಲ ವಯೋಮಾನದ ಗಂಡು ಹೆಣ್ಣಿನ ಮೋಹ. ಚಳಿಗಾಲಕ್ಕೆ ಬೆಚ್ಚಗಿರಲು, ಮಳೆಗಾಲಕ್ಕೆ ಬೆಚ್ಚಗಿದ್ದೂ ಒದ್ದೆ ಆಗದಂತಿರಲು, ಬೇಸಿಗೆಗೋ ಸನ್ ಬರ್ನ್ ತಪ್ಪಿಸುವುದು ಇದರ ಗುಣ ವಿಶೇಷ. ಹಾಗಾಗಿಯೇ ಏನಾದರು ಸರಿ ನಾವೂ ಧರಿಸಲೇಬೇಕು ಎಂದು ಅನ್ನಿಸುವಂತೆ ಮಾಡಿದೆ. ಗತಕಾಲದ ಅದರ ಇತಿಹಾಸವನ್ನು ಅದೇ ಮತ್ತೆ ಮತ್ತೆ ಮುರಿದು ಹೊಸ ಹುಟ್ಟಿನ ಜೊತೆ ಹೊಸತನವನ್ನು ಕಟ್ಟಿಕೊಳ್ಳುತ್ತಿದೆ.

ಒಂದು ಅಚ್ಚರಿಯ ಸಂಗತಿ ಎಂದರೆ, ಜಗತ್ತು ಕಂಡ ಎರಡು ಘೋರ ಮಹಾಯುದ್ಧಕ್ಕೂ ಬಾಂಬರ್ ಜಾಕೆಟ್‌ಗೂ ನೇರ ಸಂಬಂಧ ಇದೆ. ಮೊದಲು ಇದನ್ನು 'ಫ್ಲೈಟ್ ಜಾಕೆಟ್' ಎಂದು ಕರೆಯುತ್ತಿದ್ದರು. ವಾಯುಯಾನ ಪ್ರಗತಿಯೊಂದಿಗೆ ಈ ಜಾಕೆಟ್ ಕೂಡ ವಿಕಾಸಗೊಂಡಿದೆ. ಅಂದರೆ ಪೈಲಟ್‌ಗಳ ಉಡುಗೆ ಇದಾಗಿತ್ತು. ಜಾಗತಿಕ ಯುದ್ಧದ ತರುವಾಯ ಅಮೆರಿಕ ವಾಯುಸೇನೆ ತನ್ನ ಪೈಲೆಟ್‌ಗಳ ಜಾಕೆಟ್ ಶೈಲಿಯಲ್ಲಿ ಬದಲಾವಣೆಯನ್ನು ಹೆಣೆಯಿತು. ತೋಳು ಮತ್ತು ಸೊಂಟದ ಭಾಗದಲ್ಲಿ ಪಟ್ಟಿಯನ್ನು ಹಾಕಿತು. ತೋಳಿನ ತುದಿಗೂ ಬಿಗಿಯಾಗಿ ಹಿಡಿದುಕೊಳ್ಳುವಂತೆ ವಿನ್ಯಾಸಗೊಳಿಸಿತು. ಧರಿಸಲು ಮತ್ತು ತೆಗೆದಿಡಲು ಅನುಕೂಲ ಆಗುವಂತೆ ಜಿಪ್ ಜೋಡಿಸಿದರು. ಅದರಿಂದ ತಣ್ಣನೆ ಗಾಳಿಗೆ ಬ್ರೇಕ್ ಬಿದ್ದು ದೇಹವನ್ನು ಇನ್ನಷ್ಟು ಬೆಚ್ಚಗೆ ಇಡುವಂತೆ ಆಯಿತು. ಹಾಗೆಯೇ ಅದರ ಹೆಸರೂ ಬಾಂಬರ್ ಜಾಕೆಟ್ ಎಂದು ಬದಲಾಯಿತು. ಈಗ ಹಲವು ಪ್ರತಿಷ್ಠಿತ ಬ್ರಾಡೆಂಡ್